ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 9/1/24ರಂದು ಪಾಲಿಕೆಯ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅಧ್ಯಕ್ಷತೆಯಲ್ಲಿ 2023-24ನೇ ಸಾಲಿನ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಪತ್ರದ ಸಂಖ್ಯೆ: ನಅಇ 299 ಎಂಎನ್‌ಎಂ 2022 (ಇ), ಬೆಂಗಳೂರು, ದಿನಾಂಕ: 07-10-2023 ರಂತೆ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ನೀಡುವ ಬಗ್ಗೆ ರಚಿಸಲಾಗಿರುವ ಟೆಂಡರ್ ಮೌಲ್ಯಮಾಪನ ಸಮಿತಿ ಸಭೆಯ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1.	ಮುಖ್ಯ ಆಯುಕ್ತರು	: ಅಧ್ಯಕ್ಷರು
2.	ವಿಶೇಷ ಆಯುಕ್ತರು(ಯೋಜನೆ)	: ಉಪಾಧ್ಯಕ್ಷರು
3.	ವಿಶೇಷ ಆಯುಕ್ತರು(ಘತ್ಯಾನಿ)	: ಸದಸ್ಯರು
4.	ವಿಶೇಷ ಆಯುಕ್ತರು (ಹಣಕಾಸು)	: ಸದಸ್ಯರು
5.	ಪ್ರಧಾನ ಅಭಿಯಂತರರು	: ಸದಸ್ಯರು
6.	ಮುಖ್ಯ ಲೆಕ್ಕಾಧಿಕಾರಿಗಳು	: ಸದಸ್ಯರು
7.	ಮುಖ್ಯ ಅಭಿಯಂತರರು(ಯಲಹಂಕ ವಲಯ)	: ಸದಸ್ಯ ಕಾರ್ಯದರ್ಶಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನ ಸರ್ಕಾರವು 2023-24ನೇ ಸಾಲಿನ ''ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ''ಯಡಿಯಲ್ಲಿ ಮಂಜೂರಾಗಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಪತ್ರದ ಸಂಖ್ಯೆ: ನಅಇ 299 ಎಂಎನ್‌ಎಂ 2022 (ಇ), ಬೆಂಗಳೂರು, ದಿನಾಂಕ: 07-10-2023 ರಂತೆ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದ್ದು, ಟೆಂಡರ್ ಮೌಲ್ಯಮಾಪನಕ್ಕಾಗಿ ಮಾನ್ಯ ಆಯುಕ್ತರು, ಬೃಬೆಂ.ಮ.ಪಾ. ರವರ **ಆದೇಶ ಸಂಖ್ಯೆ ಮು.ಅ/ಮ.ವ/ಪಿ.ಆರ್/26/15-16, ದಿನಾಂಕ: 05-06-2015** ರ ಆದೇಶದಂತೆ ಟೆಂಡರ್ ಮೌಲ್ಯಮಾಪನ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಮೇರೆಗೆ ಮುಖ್ಯ ಅಭಿಯಂತರರು ಯಲಹಂಕ ವಲಯ ರವರು 2023-24ನೇ ಸಾಲಿನ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ಮಂಜೂರಾಗಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಪತ್ರದ ಸಂಖ್ಯೆ: ನಅಇ 299 ಎಂಎನ್‌ಎಂ 2022 (ಇ), ಬೆಂಗಳೂರು, ದಿನಾಂಕ: 07-10-2023, ರಂತೆ ಟೆಂಡರ್ ಆಹ್ವಾನಿಸಿರುವ ಪ್ಯಾಕೇಜ್ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ರವರು ನೀಡಿರುವ ತಾಂತ್ರಿಕ ವರದಿಯನ್ನು ಕ್ರೋಢೀಕರಿಸಿ ಮೌಲ್ಯಮಾಪನಕ್ಕೆ ಟೆಂಡರ್ ಮೌಲ್ಯಮಾಪನ ಸಮಿತಿ ಮುಂದೆ ತಾಂತ್ರಿಕ ಅನುಮೋದನೆಗೆ ಮಂಡಿಸಿರುತ್ತಾರೆ. ಅದರಂತೆ ತಾಂತ್ರಿಕ ಮೌಲ್ಯಮಾಪನಕ್ಕೆ ಸಂಬಂದಿಸಿದಂತೆ ಟೆಂಡರ್ ಮೌಲ್ಯಮಾಪನ ಸಮಿತಿಯು ಈ ಕೆಳಕಂಡಂತೆ ತೀರ್ಮಾನಿಸಲಾಯಿತು.

ಟೆಂಡರ್ ಮೌಲ್ಯಮಾಪನ ಸಮಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ರಂತೆ ಹಾಗೂ ಇತ್ತೀಚೆಗೆ ಹೊರಡಿಸಿದ ಸರ್ಕಾರಿ ಆದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಯಿತು.

1. ಗುತ್ತಿಗೆದಾರರ ವಾರ್ಷಿಕ ವಹಿವಾಟಿನ ಮೌಲ್ಯವನ್ನು Standard tender document KW-4 clause -3.2 (a) ಗೆ ಅನ್ವಯ ಟೆಂಡರ್ ಆಹ್ವಾನಿಸಿರುವ ಸಾಲಿಗೆ ಸಮೀಕರಿಸುವ ಸಲುವಾಗಿ ವಾರ್ಷಿಕ 10% Weightage ನೀಡಲಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: No.FD 480 Exp-12/2014, Bangalore date: 19-07-2014 Standard tender document KW-4 clause -3.2 (b) ಗೆ ಸಂಬಂಧಿಸಿದಂತೆ ಸಮಾನ ರೂಪದ ಕಾಮಗಾರಿಯ ಮೊತ್ತ ಟೆಂಡರ್‌ಗಿಟ್ಟ ಮೊತ್ತದ ಶೇ. 50 ರಷ್ಟು ಎಂದು ಪರಿಗಣಿಸಲಾಗಿದೆ.
3. Standard tender document clause –15.2 ಮತ್ತು 3.2 ಬಿ ಪರಿಗಣಿಸಲಾಗಿದೆ.

ಯಲಹಂಕ ವಲಯ – ಬ್ಯಾಟರಾಯನಪುರ ವಿಭಾಗ

ವಿಷಯದ ಸಂಖ್ಯೆ – 01

ಕ್ರ ಸಂ	ಕಾಮಗಾರಿಯ /ಪ್ಯಾಕೇಜ್ ಕಾಮಗಾರಿಗಳ ಹೆಸರು ಸರ್ಕಾರದ ಆದೇಶ ಪತ್ರದ ಸಂಖ್ಯೆ: ನಅಇ 299 ಎಂಎಸ್‌ಎ 2022 (ಇ), ಬೆಂಗಳೂರು, ದಿನಾಂಕ: 07–10–2023	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು	ಅರ್ಹತೆ/ ಅನರ್ಹತೆ ಹೊಂದಿರುವ ವಿವರಗಳು	ಷರಾ
01	**Package No. 02 (Package Consists of 05 Works Rs. 1000.00 Lakhs)** 1. Improvement of roads, drains and other allied works at Sindhi College road and surrounding areas in ward No. 09 Kempapura. 2. Improvement of roads, drains and other allied works at F block Sahakaranagara and surrounding areas in ward No. 09 Hebbala Kempapura. 3. Improvement of roads, drains and other allied works at Sanjeevininagar and surrounding areas in ward No. 09 Hebbala Kempapura. 4. Improvement of roads, drains and other allied works at Cauvery Enclave, Sampige road, Thindlu village, Indian Express layout, Dhanalakshmi layout and surrounding areas in ward No. 10 Byatarayanapura. 5. Improvement of roads, drains and other allied works at Byatarayanapura Village and surrounding areas in ward No. 10 Byatarayanapura.	ರೂ. 840.25 ಲಕ್ಷಗಳು	B B Umesha	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified
			GOPIREDDY	KW-4 Standard Tender Document ಅನುಸಾರ ನಿಗಧಿಪಡಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.	Technically Qualified

ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ 26–12–2023 ರಂದು ತೆರೆಯಲಾಗಿದ್ದು, ಈ ಟೆಂಡರ್‌ನಲ್ಲಿ ಭಾಗವಹಿಸಿರುವ ಬಿಡ್‌ದಾರರು ಸಲ್ಲಿಸಿರುವ **Annual turn over, Work done certificate, Line of Credit, Required Machinery details & Bid Capacity** ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ದೃಢೀಕರಿಸಿಕೊಳ್ಳಲಾಗಿರುವುದಾಗಿ ಸಂಬಂಧಿಸಿದ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ಮತ್ತು ಮುಖ್ಯ ಅಭಿಯಂತರರು ಯಲಹಂಕ ವಲಯರವರು ತಾಂತ್ರಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತಿಳಿಸಿದ್ದು, ಟೆಂಡರ್‌ನಲ್ಲಿ ಭಾಗವಹಿಸಿರುವ ಎಲ್ಲಾ ಗುತ್ತಿಗೆದಾರರ ದಾಖಲಾತಿಗಳನ್ನು ಪರಿಶೀಲಿಸಿ ದೃಢೀಕರಿಸಿರುತ್ತಾರೆ.

ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹತೆ ಹೊಂದಿರುವ ಬಿಡ್‌ದಾರರಾದ 1) B B Umesha ಮತ್ತು 2) GOPIREDDY ರವರು KW-4 Standard Tender Document ಅನುಸಾರ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ತಾಂತ್ರಿಕವಾಗಿ ಅರ್ಹಗೊಳಿಸಲಾಗಿದೆ. ಆದುದರಿಂದ ಸದರಿಯವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಕ್ರಮಕೈಗೊಳ್ಳಲು ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂದಾನ ಸಮಿತಿಯ ಮುಂದೆ ಟಿಪ್ಪಣಿ ಪರಿಶೀಲಿಸಲಾಯಿತು.

ತೀರ್ಮಾನ:

ಸದರಿ ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ, ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ ವಿಭಾಗ) ರವರು ಸಿದ್ದಪಡಿಸಿರುವ ತಾಂತ್ರಿಕ ತುಲನಾತ್ಮಕ ಪಟ್ಟಿಯನ್ನು ಅವಲೋಕಿಸಲಾಯಿತು. ಸದರಿ ತುಲನಾತ್ಮಕ ಪಟ್ಟಿಯಂತೆ ಬಿಡ್‌ದಾರರಾದ 1) B B Umesha ಮತ್ತು 2) GOPIREDDY ರವರು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದಿರುವುದರಿಂದ ಸದರಿಯವರ ತಾಂತ್ರಿಕ ಬಿಡ್ಡನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಸಭೆಯು ತೀರ್ಮಾನಿಸಿತು.

ಮುಖ್ಯ ಅಭಿಯಂತರರು,
ಯಲಹಂಕ ವಲಯ
(ಸದಸ್ಯ ಕಾರ್ಯದರ್ಶಿ)

ಪ್ರಧಾನ ಅಭಿಯಂತರರು
ಬಿಬಿಎಂಪಿ (ಸದಸ್ಯರು)

ಮುಖ್ಯ ಲೆಕ್ಕಾಧಿಕಾರಿ,
ಬಿಬಿಎಂಪಿ ಸದಸ್ಯರು.

ವಿಶೇಷ ಆಯುಕ್ತರು (ಹಣಕಾಸು)
(ಸದಸ್ಯರು)

ವಿಶೇಷ ಆಯುಕ್ತರು (ಘನತ್ಯಾಜ್ಯ)
(ಸದಸ್ಯರು)

ವಿಶೇಷ ಆಯುಕ್ತರು (ಯೋಜನೆ)
(ಉಪಾಧ್ಯಕ್ಷರು)

ಮುಖ್ಯ ಆಯುಕ್ತರು
ಹಾಗೂ ಅಧ್ಯಕ್ಷರು, ತಾಂತ್ರಿಕ
ಮೌಲ್ಯಮಾಪನ/ಆರ್ಥಿಕ ಮೌಲ್ಯ ಮಾಪನ
ಮತ್ತು ದರಸಂಧಾನ ಸಮಿತಿ (ಅಧ್ಯಕ್ಷರು)